ರಾಜ್ಯ ಸರ್ಕಾರದ ಆಧೀನದಲ್ಲಿರುವ ಯಾವ್ಯಾವ ಉದ್ದಿಮೆಗಳು ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆಯೋ ಅದಕ್ಕೆ ಚೆನ್ನಾಗಿ ಉತ್ತೇಜನ ಕೊಡುತ್ತೇವೆ, ಎಲ್ಲಿ ಉದ್ದಿಮೆಗಳು ರೋಗಗ್ರಸ್ತವೆಂದು ತಿಳಿದುಬರುತ್ತದೆಯೋ ಅಲ್ಲಿ ಪುನಶ್ಚೇತನಗೊಳಿಸುವುದಕ್ಕೆ ಪ್ರಯತ್ನಿಸುತ್ತೇವೆ. ಆದರೆ, ಬ್ಲೇಡು, ಸೋಪುಗಳನ್ನು ತಯಾರಿಸುವ ಕೆಲಸ ಸರ್ಕಾರದ್ದಲ್ಲವೆಂದು ನಾನು ಭಾವಿಸಿದ್ದೇನೆ. ಮತ್ತೊಂದು ವಿಚಾರ ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವಂತೆ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಕೆನರಾ ಬ್ಯಾಂಕ್‌ನವರನ್ನು ಆಪರೇಟಿಂಗ್ ಏಜೆನ್ಸಿ ಬಿ.ಐ.ಎಫ್.ಆರ್.ನವರು ನೇಮಿಸಿದ್ದು; ಅಲ್ಲಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನವರೂ ಈ ಕಾರ್ಖಾನೆಯನ್ನು ಟೇಕ್ ಓವರ್ ಮಾಡುತ್ತೇವೆಂಬ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಅದೂ ಸಹ ಅವರ ಪರಿಶೀಲನೆಯಲ್ಲಿದೆ.

ಶ್ರೀ ಜಿ.ಬಿ. ಶಿವಕುಮಾರ್ : ಬಿಐಎಫ್‌ಆರ್‌ನವರು ಜನವರಿ 5ನೇ ತಾರೀಖಿನವರೆಗೆ ಗಡುವು ಕೊಟ್ಟಿದ್ದಾರೆ. ಅದನ್ನು ತೆರೆಯುವುದಕ್ಕೆ ತಾವು ಸರ್ಕಾರದ ವತಿಯಿಂದ ಚರ್ಚೆ ಮಾಡಿ ನಿರ್ಣಯ ತೆಗೆದುಕೊಂಡರೆ ಒಂದು ಕಾಲಾವಧಿ ಕೊಟ್ಟಂತಾಗುತ್ತದೆ. ಅದೇ ರೀತಿ ಮರ್ಜಿ ಪಿಟಿಷನ್‌ನ ಡೆತ್ ಸಂಟೆನ್ಸ್ ಮುಂದೆ ಹೋಗುವಂತೆ ಕ್ರಮ ತೆಗೆದುಕೊಳ್ಳಬೇಕು. ಕಾಲಾವಧಿ ವಿಸ್ತರಿಸಿದರೆ ಸರ್ಕಾರ ಇದರ ಬಗ್ಗೆ ಮುಕ್ತ ಮನಸ್ಸು ಹೊಂದಿದೆ ಎನ್ನುವ ಭಾವನೆ ತಳಿದಂತಾಗುತ್ತದೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ರಾಜ್ಯ ಸರ್ಕಾರದಿಂದ ಯಾವುದೇ ರೀತಿ ವಿಳಂಬವಾಗಿಲ್ಲ. ಅಫಿಡವಿಟ್ ಫೈಲ್ ಮಾಡಿದ್ದು ಕನ್‌ಸೆಷನ್ ಕೊಡುತ್ತೇವೆಂದು ಹೇಳಿದ್ದೇವೆ. ಈಗ ಮತ್ತೆ ಮಾನ್ಯ ಸದಸ್ಯರ ಜೊತೆ ಚರ್ಚಿಸಿ ರಾಜ್ಯ ಸರ್ಕಾರದ ಕಡೆಯಿಂದ ಹೆಚ್ಚಿನ ಪ್ರಭಾವ, ಒತ್ತಡ ಏನು ತರಬೇಕಾಗಿದೆಯೋ ಆ ದಿಸೆಯಲ್ಲಿ ಕೆಲಸ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

2. **ರಾಜ್ಯದಲ್ಲಿ ಒಂದಂಕಿ ಲಾಟರಿ ಟಿಕೇಟನ್ನು ರದ್ದುಗೊಳಿಸುವ ಕುರಿತು.**

ಶ್ರೀ ಶ್ಯಾಮನೂರು ಶಿವಶಂಕರಪ್ಪ (ದಾವಣಗೆರೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಒಂದಂಕಿ ಲಾಟರಿಯಿಂದ ಲಕ್ಷಾಂತರ ಬಡ ಕುಟುಂಬಗಳು ಬೀದಿಪಾಲಾಗಿರುವುದರಿಂದ ಹಾಗೂ ಹಲವಾರು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಒಂದಂಕಿ ಲಾಟರಿಯನ್ನು ಕೂಡಲೇ ರದ್ದುಗೊಳಿಸುವ ಬಗ್ಗೆ ನಾನು ಮಾನ್ಯ ಹಣಕಾಸು ಹಾಗೂ ಯೋಜನಾ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಶ್ಯಾಮನೂರು ಶಿವಶಂಕರಪ್ಪ ಮತ್ತು ಹೆಚ್. ಶಿವಪ್ಪನವರು ಸರ್ಕಾರದ ಗಮನವನ್ನು ಏನು ಸೆಳೆದಿದ್ದಾರೆ. ಈ ಕುರಿತ ಹೇಳಿಕೆಯನ್ನು ತಮ್ಮ ಅನುಮತಿ ಪಡೆದು ಓದುತ್ತೇನೆ.

ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದು 1969-70 ರಿಂದ ಕರ್ನಾಟಕ ರಾಜ್ಯ ಲಾಟರಿಯನ್ನು ಆರಂಭಿಸಲಾಗಿದೆ. ಈ ಲಾಟರಿಯನ್ನು ರಾಜ್ಯ ಸರ್ಕಾರವೇ ನೇರವಾಗಿ ವ್ಯವಸ್ಥೆಗೊಳಿಸಿ ನಡೆಸುತ್ತಿದೆ. ಲಾಟರಿಯ ಟಿಕೇಟುಗಳು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ಮಾರಾಟ ಮಾಡಲ್ಪಡುತ್ತಿವೆ. ಟಿಕೇಟುಗಳ ಮುದ್ರಣದಲ್ಲಿ ಯಾವುದೇ ಲೋಪ ಬಾರದಂತೆ ನೋಡಿಕೊಳ್ಳಲು ಅವುಗಳನ್ನು ಸೆಕ್ಯೂರಿಟಿ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತಿದೆ. ಸರ್ಕಾರದಿಂದ ನೇಮಕಗೊಂಡ ಸಮಿತಿಯ ಉಸ್ತುವಾರಿಯಲ್ಲಿ ಲಾಟರಿಯ ಡ್ರಾಗಳನ್ನು ನಡೆಸಲಾಗುತ್ತಿದೆ. ಹೀಗೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಕರ್ನಾಟಕ ರಾಜ್ಯ ಲಾಟರಿಯಲ್ಲಿ ಯಾವುದೇ ದುರ್‌ವ್ಯವಹಾರಕ್ಕೆ

ಕರ್ನಾಟಕದಲ್ಲಿ ಸ್ವಲ್ಪ ಸಮಯ ಒಂದಂಕಿ ಲಾಟರಿಯು ಇತ್ತು. ಆದರೆ ಈ ಲಾಟರಿಯಿಂದ ಸಾಮಾನ್ಯ ಜನರ ಮೇಲೆ ಆಗುವ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮವನ್ನು ಗಮನಿಸಿ 29.11.92 ರಿಂದ ಜಾರಿಗೆ ಬರುವಂತೆ ಈ ಲಾಟರಿಯನ್ನು ರದ್ದುಗೊಳಿಸಲಾಗಿದೆ. ಬೇರೆ ರಾಜ್ಯಗಳ ಒಂದಂಕಿ ಲಾಟರಿ ಟಿಕೇಟುಗಳು ಕರ್ನಾಟಕದಲ್ಲಿ ಮಾರಾಟವಾಗುತ್ತಿವೆ. ಕರ್ನಾಟಕದ ಒಂದಂಕಿ ಲಾಟರಿಯನ್ನು ರದ್ದುಗೊಳಿಸಿದಾಗ್ಯೂ ಬೇರೆ ರಾಜ್ಯಗಳ ಒಂದಂಕಿ ಲಾಟರಿಯನ್ನು ಕರ್ನಾಟಕವು ರದ್ದುಗೊಳಿಸುವ ಸ್ಥಿತಿಯಲ್ಲಿಲ್ಲ.

ಲಾಟರಿಗಳಲ್ಲಿ ಎರಡು ವಿಧಗಳಿವೆ:

1. ರಾಜ್ಯ ಸರ್ಕಾರದಿಂದ ವ್ಯವಸ್ಥೆಗೊಳಿಸಿದ ಲಾಟರಿಗಳು
2. ಇತರೆಯವು ಅಂದರೆ, ರಾಜ್ಯ ಸರ್ಕಾರದಿಂದ ಅಂಗೀಕಾರ ಪಡೆದ ಲಾಟರಿಗಳು ಮತ್ತು ಖಾಸಗಿ ಲಾಟರಿಗಳು.

ಮೇಲ್ಕಂಡ ಮೊದಲನೆಯ ವರ್ಗದಲ್ಲಿ ಬರುವ ಒಂದು ರಾಜ್ಯದ ಲಾಟರಿಯ ಟಿಕೇಟುಗಳ ಮಾರಾಟವನ್ನು ನಿಯಂತ್ರಿಸುವ ಅಧಿಕಾರ ಇನ್ನೊಂದು ರಾಜ್ಯಕ್ಕೆ ಇಲ್ಲ. ಆದರೆ ಟಿಕೇಟುಗಳ ಮಾರಾಟವನ್ನು ನಿಯಂತ್ರಿಸುವ ಅಧಿಕಾರ ಇನ್ನೊಂದು ರಾಜ್ಯಕ್ಕೆ ಇಲ್ಲ. ಆದರೆ ಮೇಲ್ಕಂಡ ಎರಡನೆಯ ವರ್ಗದಲ್ಲಿ ಬರುವ ಲಾಟರಿಯ ಟಿಕೇಟುಗಳ ಮಾರಾಟವನ್ನು ನಿಯಂತ್ರಿಸಬಹುದು. ಯಾವುದೇ ರಾಜ್ಯದ ಲಾಟರಿ ಟಿಕೇಟುಗಳ ಮಾರಾಟವು ಸಾಮಾನ್ಯ ಜನತೆಯ ಮೇಲೆ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮಗಳನ್ನು ಬೀರುವುದೆಂದು ಒಂದು ರಾಜ್ಯ ಸರ್ಕಾರವು ಭಾವಿಸಿದರೆ ಅಂತಹ ಲಾಟರಿಯನ್ನು ರದ್ದುಮಾಡಲು ಆ ರಾಜ್ಯ ಸರ್ಕಾರಕ್ಕೆ ಅನುಮತಿ ನೀಡುವಂತೆ ಒಂದು ಶಾಸನವನ್ನು ಮಾಡಬೇಕೆಂದು ಅಥವಾ ಒಂದು ಸುಗ್ರಿವಾಜ್ಞೆಯನ್ನು ಹೊರಡಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರದ ನೀತಿಯಂತೆ ಇಲ್ಲಿ ಖಾಸಗಿ ಲಾಟರಿಗಳನ್ನು ನಡೆಸಲು ಅನುಮತಿಯನ್ನು ನೀಡುತ್ತಿಲ್ಲ. ಕೆಲವು ಖಾಸಗಿ ಲಾಟರಿಗಳು ರಾಜ್ಯ ಸರ್ಕಾರದಿಂದ ವ್ಯವಸ್ಥೆಗೊಳಿಸಲ್ಪಟ್ಟ ಲಾಟರಿಗಳೆಂಬಂತೆ ನಡೆಸಲ್ಪಡುತ್ತವೆ. ಕೆಲವು ವೇಳೆ ಇವೆರಡರಲ್ಲಿ ವ್ಯತ್ಯಾಸವನ್ನು ಕಂಡು ಹಿಡಿಯುವುದು ಕಷ್ಟಸಾಧ್ಯವಾಗುತ್ತದೆ. 21.4.94 ರಂದು ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ ನಿಜವಾಗಿಯೂ ಒಂದು ರಾಜ್ಯದಿಂದ ವ್ಯವಸ್ಥೆಗೊಳಿಸಲ್ಪಟ್ಟ ಲಾಟರಿ ಯೋಜನೆಯು ಹೊಂದಿರಬೇಕಾದಂತಹ ಕೆಲವು ಮುಖ್ಯ ಲಕ್ಷಣಗಳನ್ನು ನಮೂದಿಸಿದೆ. ಅವುಗಳೆಂದರೆ :

1. ರಾಜ್ಯ ಸರ್ಕಾರವು ಲಾಟರಿ ಟಿಕೇಟುಗಳು ಮೇಲೆ ಆಯಾ ರಾಜ್ಯದ ಲಾಂಛನವನ್ನು ಮುದ್ರಿಸಿರಬೇಕು. ಇದರಿಂದ ಟಿಕೇಟುಗಳ ನೈಜತೆ (genuiness) ದೃಢಪಡುತ್ತದೆ.
2. ರಾಜ್ಯ ಸರ್ಕಾರವೇ ಲಾಟರಿ ಟಿಕೇಟುಗಳನ್ನು ಮಾರಬೇಕು ಇಲ್ಲವೇ ಏಕೈಕ ಹಂಚಿಕೆದಾರ ಅಥವಾ ಅನೇಕ ಹಂಚಿಕೆದಾರರ ಮುಖಾಂತರ ಮಾರಬೇಕು. ಇಂತಹ ಹಂಚಿಕೆದಾರರು ಮತ್ತು ಸರ್ಕಾರದ ನಡುವೆ ಒಂದು ಒಪ್ಪಂದವಾಗಿರಬೇಕು. ಲಾಟರಿ ಟಿಕೇಟುಗಳಿಂದ ಬರುವ ಆದಾಯವು ರಾಜ್ಯದ ಸಂಚಿತ ನಿಧಿಗೆ ಜಮೆಯಾಗಬೇಕು.
3. ಬಹುಮಾನ ಪಡೆಯುವ ಟಿಕೇಟುಗಳ ಆಯ್ಕೆ ಮಾಡಲು ಲಾಟರಿಯ ಡ್ರಾ ಅನ್ನು ಸರ್ಕಾರವೇ ನಡೆಸಬೇಕು.
4. ಯಾರೂ ಕ್ಲೈಂ ಸಲ್ಲಿಸದ ಬಹುಮಾನದ ಹಣ ಅಥವಾ ಬೇರೆ ರೀತಿಯಲ್ಲಿ

ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ತೀರ್ಪು ಹೊರಬಿದ್ದ ನಂತರ ಅನೇಕ ರಾಜ್ಯ ಸರ್ಕಾರಗಳು ತಾವು ಲಾಟರಿ ಟಿಕೇಟುಗಳನ್ನು ಈ ರಾಜ್ಯದಲ್ಲಿ ಮಾರಲು ಅನುಮತಿ ನೀಡಬೇಕೆಂದು ಕೋರಿಕೆ ಸಲ್ಲಿಸುತ್ತಿವೆ. ಈ ಎಲ್ಲ ರಾಜ್ಯಗಳು ನಡೆಸುತ್ತಿರುವ ಲಾಟರಿಗಳು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ನಿಜವಾಗಿಯೂ ಒಂದು ರಾಜ್ಯವು ವ್ಯವಸ್ಥೆ ಮಾಡಿರುವ ಲಾಟರಿಗಳು ಎಂದು ಸಿದ್ಧಪಡಿಸಲು ಕೆಲವು ಮಾಹಿತಿಗಳನ್ನು ನೀಡುವಂತೆ ಈ ರಾಜ್ಯ ಸರ್ಕಾರಗಳನ್ನು ಕೋರಲಾಗಿದೆ. ಮಣಿಪುರ, ಮಿಜೋರಾಂ, ಪಂಜಾಬ್ ಮತ್ತು ಅರುಣಾಚಲ ಪ್ರದೇಶ ರಾಜ್ಯ ಸರ್ಕಾರಗಳು ಮಾಹಿತಿಗಳನ್ನು ಒದಗಿಸಿದೆ. ಇವುಗಳನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಶ್ಯಾಮನೂರು ಶಿವಶಂಕರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಗೃಹ ಸಚಿವರು ಈಗಾಗಲೇ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಒಂದಂಕಿ ಲಾಟರಿಯಿಂದ ದೇಶದಲ್ಲಿ ಅದರಲ್ಲೂ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನರು ಇವತ್ತಿನ ದಿವಸ ಹಣವನ್ನು ಕಳೆದುಕೊಂಡು, ಮನೆಮಠಗಳನ್ನು ಕಳೆದುಕೊಂಡು ಆತ್ಮಹತ್ಯೆಯನ್ನು ಮಾಡಿಕೊಳ್ಳತಕ್ಕಂಥ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈಗಾಗಲೇ ಗೃಹ ಸಚಿವರು ಒಂದಂಕಿ ಲಾಟರಿಯನ್ನು ನಿಲ್ಲಿಸಲು ಪ್ರಯತ್ನ ಪಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಲಾಟರಿ ಮಾರಾಟಗಾರರು ಸರ್ವೋಚ್ಚ ನ್ಯಾಯಾಲಯಕ್ಕಾದರು ಹೋಗಲಿ, ಎಲ್ಲಿ ಬೇಕಾದರೂ ಹೋಗಲಿ, ಇವತ್ತು ಸರ್ಕಾರದವರು ಒಂದಂಕಿ ಲಾಟರಿ ಮಾರಾಟವನ್ನು ನಿಷೇಧ ಮಾಡತಕ್ಕ ಕೆಲಸವನ್ನು ಕರ್ನಾಟಕದಲ್ಲಿ ಹಾಕಿಕೊಳ್ಳಬೇಕು. ಇದನ್ನು ಕಾಂಗ್ರೆಸ್ ಪಕ್ಷ, ಬಿಜೆಪಿ ಅಥವಾ ಜನತಾದಳ ಪಕ್ಷದವರುಗಳಿರಬಹುದು ಎಲ್ಲರೂ ಪಕ್ಷಭೇದವನ್ನು ಮರೆತು ಯಾರು ಸಹ ಒಂದಂಕಿ ಲಾಟರಿಗೆ ಪ್ರಚೋದನೆ ಕೊಡತಕ್ಕವರಲ್ಲ, ಈ ಲಾಟರಿಯನ್ನು ಎಲ್ಲರೂ ವಿರೋಧಿಸುತ್ತೇವೆ. ಜನರ ಹಾನಿ ಮತ್ತು ಮಾನವನ್ನು ಕಾಪಾಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು ಮತ್ತು ಇದಕ್ಕೆ ಶಾಸನಬದ್ಧ ವ್ಯವಸ್ಥೆಯನ್ನು ಮಾಡುವುದಕ್ಕೆ ಬೇಕಾದ ಅನುಕೂಲಗಳನ್ನು ಕೊಡಬೇಕು, ಅದಕ್ಕೆ ನಮ್ಮಗಳೆಲ್ಲರ ಸರ್ವತೋಮುಖ ಬೆಂಬಲವನ್ನು ಕೊಡಲು ನಾವು ತಯಾರಾಗಿದ್ದೇವೆ. ಸರ್ಕಾರ ಈ ಕೆಲಸವನ್ನು ನಿರ್ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ನಮ್ಮ ರಾಜ್ಯದಲ್ಲಿ ಒಂದಂಕಿ ಲಾಟರಿ ಇಲ್ಲ, ಅದು ನಿಷೇಧವಾಗಿದೆ. ಆದರೆ ಮಾನ್ಯ ಸದಸ್ಯರು ಪಕ್ಷಭೇದವನ್ನು ಮರೆತು ಸುಪ್ರೀಮ್ ಕೋರ್ಟ್‌ಗೆ ಹೋಗಬೇಕೆಂದು ಹೇಳುತ್ತಿದ್ದಾರೆ. ಅಲ್ಲಿಗೆ ಹೋಗುವುದು ಬೇಡ. ತಾವು ಪ್ರಧಾನ ಮಂತ್ರಿಗಳಿಗೆ ಇದರ ಬಗ್ಗೆ ತಿಳಿಸಿಬಿಡಿ. ಅಷ್ಟೇ ಸಾಕು.

ಶ್ರೀ ಶ್ಯಾಮನೂರು ಶಿವಶಂಕರಪ್ಪ : ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ರಾಜ್ಯಗಳ ಲಾಟರಿ ಮಾರಾಟವಾಗುತ್ತಿದೆ. ಅದನ್ನು ನಿಲ್ಲಿಸಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಜಗದೀಶ್ ಶೆಟ್ಟರ್ ಅವರೆ, ತಾವು ಹೊಸದಾಗಿ ಬಂದಿದ್ದೀರಿ. ಇದು ಗಮನ ಸೆಳೆಯುವ ಸೂಚನೆ, ಯಾರು ಸಹಿ ಮಾಡಿದ್ದಾರೋ ಅವರೇ ಭಾಗವಹಿಸಬೇಕು. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಒಂದಂಕಿ ಲಾಟರಿಯನ್ನು ನಿಷೇಧಿಸಿದ್ದೇವೆಂದು ಮಾನ್ಯ ಅರ್ಥ ಸಚಿವರು ಹೇಳಿದರು. ಬೇರೆ ರಾಜ್ಯದಿಂದ ಬರತಕ್ಕಂಥ ಒಂದಂಕಿ ಲಾಟರಿ ಏನಿದೆ ಅದು ನಮ್ಮ ರಾಜ್ಯದಲ್ಲಿ ವ್ಯಾಪಕವಾಗಿ ಮಾರಾಟವಾಗುತ್ತಿದೆ, ಜನರು ಇದನ್ನು ಕೊಂಡುಕೊಂಡು, ನಮ್ಮ ಸ್ನೇಹಿತರು ಹೇಳಿದಂತೆ ಸಾವಿಗೆ ಒಳಗಾಗಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕ ದುಷ್ಪರಿಣಾಮಕ್ಕೆ ಒಳಗಾಗಿದ್ದಾರೆ. ಆ ವ್ಯವಸ್ಥೆಯನ್ನು ತಡೆಗಟ್ಟಲು ಸರ್ಕಾರದಿಂದ ಆಗುವುದಿಲ್ಲವೇ ಅಥವಾ

ಇದರಿಂದ ಬೇರೆ ರಾಜ್ಯಕ್ಕೂ ನಮ್ಮ ರಾಜ್ಯಕ್ಕೂ ಲಾಟರಿ ಮಾರಾಟದ ಬಗ್ಗೆ ಒಪ್ಪಂದವಾಗಿದೆಯೇ? ಆ ರೀತಿ ಒಪ್ಪಂದವಾಗಿದ್ದರೆ ನಮ್ಮ ರಾಜ್ಯಕ್ಕೆ ಏನಾದರೂ ಆದಾಯ ಬರುತ್ತದೆಯೇ? ಇದರ ಬಗ್ಗೆ ತಮ್ಮ ವಿವರಣೆಯನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು : ಹೇಳಿಕೆಯನ್ನು ಪೂರ್ಣ ಓದಲಿಲ್ಲವೇ? ದಯಮಾಡಿ ಇನ್ನೊಂದು ಸಾರಿ ಓದಿ. ಉತ್ತರ ಸಮರ್ಪಕವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ಸಂತೋಷದ ಸಂಗತಿ ಯುಎನ್‌ಐನಲ್ಲಿ ಟಿಲಿಪ್ರಿಂಟ್ ಆಗಿ ಬರುತ್ತಿದೆ. ಕೊಯಮತ್ತೂರಿನಲ್ಲಿ ಶಿರಮೊಗ್ಗಿ ಹತ್ತಿರ....

ಶ್ರೀ ಮಾಟಾಳ್ ನಾಗರಾಜ್ : ವೀರಪ್ಪನ್‌ನನ್ನು ಸರ್ಕಾರ ಹಿಡಿದಿದೆಯೇ, ಎಂಬ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ಗಮನ ಸೆಳೆಯುವ ಸೂಚನೆ ಆದ ನಂತರ, ತೆಗೆದುಕೊಳ್ಳುವುದಾಗಿ ತಾವು ಹೇಳಿದಿರಿ. ನಾನು ತಮ್ಮ ಮಾತಿನ ಪ್ರಕಾರ ಕುಳಿತಿದ್ದೇನೆ. ದಯಮಾಡಿ....

ಅಧ್ಯಕ್ಷರು : ಅವರು ಆ ವಿಷಯ ಪ್ರಸ್ತಾಪ ಮಾಡುತ್ತಾರೆಂದು ನನಗೆ ಗೊತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವೇ, ಮಾತನಾಡಿ. ವೀರಪ್ಪನ್ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದರಲ್ಲಿ ಡಿವೈಎಸ್‌ಪಿ ಯಶಸ್ವಿಯಾಗಿದ್ದಾರೆ. ಅದು ಆನಂದದ ಸಂಗತಿ. ಮತ್ತು ವೀರಪ್ಪನ್‌ನ ಬಲಗೈ ಭಂಟರು 3 ಜನರನ್ನು ದಸ್ತಗಿರಿ ಮಾಡಿದ್ದಾರೆ. ಗುಂಡಿನ ಚಕಮಕಿ ಆಗುತ್ತಿದೆ. ಇದಕ್ಕೆ ಗೃಹ ಮಂತ್ರಿಗಳು ಇದ್ದಾರೆ. ಏನಾಗಿದೆ ಎಂಬ ವಿವರಗಳು ಇದ್ದರೆ ನೀಡಲಿ.

ಅಧ್ಯಕ್ಷರು : ಬಹಳ ಹೊತ್ತಿಗೆ ಮೊದಲೆ ಸನ್ಮಾನ್ಯ ಸದಸ್ಯರಾದ ಮಾಟಾಳ್ ನಾಗರಾಜ್‌ರವರು ನನ್ನ ಅನುಮತಿ ಕೇಳಿದರು. ಗಮನಸೆಳೆಯುವ ಸೂಚನೆಯಾದ ಮೇಲೆ ಪ್ರಸ್ತಾಪ ಮಾಡೋಣ ಎಂದು ಹೇಳಿದೆ. ತಾವು ಈ ವಿಷಯ ಪ್ರಸ್ತಾಪ ಮಾಡುವ ಅಂದಾಜು ಇರಲಿಲ್ಲ.

ಶ್ರೀ ಮಾಟಾಳ್ ನಾಗರಾಜ್ : ನಾನು ಒಂದಂಕಿ ಲಾಟರಿ ಬಗ್ಗೆ ಎತ್ತಿದ್ದಾರೆಂದು ತಿಳಿದುಕೊಂಡೆ. ಇವರು ಈ ತರಹ ಎತ್ತಿರುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು : ನಾಗರಾಜ್‌ರವರೇ, ಅವರು ಒಂದು ಅಂಕಿಯಲ್ಲಿ ಈಗ ಇಲ್ಲ, ಎರಡು ಅಂಕಿಯಲ್ಲಿದ್ದಾರೆ. 40 ಜನ ಬಂದಿದ್ದಾರೆ. ಒಂದಂಕಿಗೂ ಅವರಿಗೂ ಏನು ಸಂಬಂಧ?

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ದಂತಚೋರ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ

ಶ್ರೀ ಮಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನರ ಹಂತಕ ದಂತ ಚೋರ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಈ ಸದನದಲ್ಲಿ ಸುಮಾರು ಐದಾರು ವರ್ಷಗಳಿಂದ ನಾವು ಒಂದೇ ಸಮನೆ ಕೇಳಿದ್ದೇವೆ. ಬಂದಂತಹ ಎಲ್ಲಾ ಮುಖ್ಯ ಮಂತ್ರಿಗಳು, ಎಲ್ಲಾ ಗೃಹ ಮಂತ್ರಿಗಳು ನಾವು ನಾಳೆ ಬೆಳಿಗ್ಗೆನೇ ಹಿಡಿದು ತರುತ್ತೇವೆಂದು ಭರವಸೆಯನ್ನು ಕೊಟ್ಟಿದ್ದು ಉಂಟು. ಬಂಗಾರಪ್ಪನವರು ನಾವು ಹೇಳಿಲ್ಲ ಎಂದು ಹೇಳುತ್ತಾರೆ. ಅವರ ಕಾಲದಲ್ಲಿದ್ದ ಗೃಹ ಮಂತ್ರಿಗಳು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು ನಮ್ಮ ಕಾಂಗ್ರೆಸ್‌ನ ಮುಖಂಡರು ಏನು ಹೇಳುತ್ತಾರೆ